ದಾವಣಗೆರೆ ಜಿಲ್ಲೆ ತೋಳಹುಣಸೆಯಲ್ಲಿ ರೇಷ್ಮೆ ಇಲಾಖೆಯಿಂದ ಕಟ್ಟಿರುವ ಕಟ್ಟಡಗಳು

312 (554) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಜಿಲ್ಲೆ ತೋಳಹುಣಸೆಯಲ್ಲಿ ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ರೇಷ್ಮೆ ಇಲಾಖೆಯಿಂದ ಹಲವು ಇಲಾಖೆಗಳ ಕಟ್ಟಡಗಳನ್ನು ನಿರ್ಮಿಸಿದ್ದು ಯಾವುದೇ ಚಟುವಟಿಕೆ ಇಲ್ಲದೆ ಈ ಕಟ್ಟಡಗಳು ಅನುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡಗಳನ್ನು ಯಾವಾಗ ಕಟ್ಟಲಾಯಿತು ಮತ್ತು ಎಷ್ಟು ಖರ್ಚು ಮಾಡಲಾಗಿದೆ? ವಿವರ ನೀಡುವುದು;

ಇ) ರಾಜ್ಯದ ರೇಷ್ಮೆ ಇಲಾಖೆಗೆ ಈ ಕಟ್ಟಡಗಳು ಉಪಯುಕ್ತವಿಲ್ಲದಿದ್ದಲ್ಲಿ ಕೇಂದ್ರ ರೇಷ್ಮೆ ಮಂಡಳಿಗೆ ಈ ಕಟ್ಟಡಗಳನ್ನು ವರ್ಗಾಯಿಸಲು ಸರ್ಕಾರ ಯೋಚಿಸಿದೆಯೆ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ದಾವಣಗೆರೆ ಜಿಲ್ಲೆ ತೋಳಹುಣಸೆಯಲ್ಲಿ

1. ಸರ್ಕಾರಿ ರೇಷ್ಮೆ ತರಬೇತಿ ಶಾಲೆ

2. ಸರ್ಕಾರಿ ರೇಷ್ಮೆ ನೂಲು ಬಿಚ್ಚುವ ಘಟಕಗಳ ಕಾರ್ಯನಿರ್ವಹಿಸುತ್ತಿವೆ. ಅವುಗಳಿಗೆ ಸಂಬಂಧಿಸಿದ ಕಟ್ಟಡಗಳನ್ನು ಉಪಯೋಗಿಸಲಾಗುತ್ತಿದೆ. ಕಟ್ಟಡಗಳ ವಿವರ ಮತ್ತು ಅವುಗಳ ಉಪಯೋಗ ಅನುಬಂಧ - 1 ರಲ್ಲಿ ತೋರಿಸಲಾಗಿದೆ.

ಆ) ವಿವರಗಳನ್ನು ಅನುಬಂಧ - 1ರಲ್ಲಿ ನೀಡಿದೆ.

ಇ) ಎಲ್ಲಾ ಕಟ್ಟಡಗಳನ್ನು ಇಲಾಖೆಯ ಉಪಯೋಗಿಸುತ್ತಿರುವುದರಿಂದ ಕೇಂದ್ರ ರೇಷ್ಮೆಮಂಡಳಿಗೆ ಕಟ್ಟಡಗಳನ್ನು ನೀಡುವ ಯೋಜನೆ ಇರುವುದಿಲ್ಲ.

ಅನುಬಂಧ-1

ದಾವಣಗೆರೆ ಜಿಲ್ಲೆ ತೋಳಹುಣಸೆಯಲ್ಲಿ ನಿರ್ಮಿಸಿರುವ ಇಲಾಖೆಯ ಕಟ್ಟಡಗಳ ವಿವರಗಳ ಪಟ್ಟಿ

ಕ್ರಮ ಸಂಖ್ಯೆ	ಕಟ್ಟಡದ ಹೆಸರು	ವೆಚ್ಚ (ರೂ.ಗಳಲ್ಲಿ)	ಪ್ರಸ್ತುತ ಬಳಕೆ
1	2	3	4
I	**ಪ್ರಥಮ ಹಂತದಲ್ಲಿ ನಿರ್ಮಿಸಿರುವ ಕಟ್ಟಡಗಳು 1981-85**		
1.	ತರಬೇತಿ ಶಾಲೆ ಕಟ್ಟಡ	4.99	ಪಾಠ ಪ್ರವಚನಕ್ಕೆ ಲೈಬ್ರರಿ ಹಾಗೂ ಆಡಳಿತ ಕಛೇರಿಗೆ ಉಪಯೋಗಿಸಲಾಗುತ್ತಿದೆ
2.	ಪುರುಷ ತರಬೇತಿದಾರರ ವಸತಿ ಗೃಹ	9.69	ಪುರುಷ ತರಬೇತಿದಾರರ ತಂಗುವಿಕೆಗೆ ಬಳಸಲಾಗುತ್ತಿದೆ
3.	ಪ್ರಾಂಶುಪಾಲರ ವಸತಿ ಗೃಹ	2.50	ಪ್ರಾಂಶುಪಾಲರ ವಸತಿಗಾಗಿ ಬಸಳಲಾಗುತ್ತಿದೆ
4.	ಉಪನ್ಯಾಸಕರ ವಸತಿ ಗೃಹಗಳು(2)	4.40	ಉಪನ್ಯಾಸಕರ ವಸತಿಗಾಗಿ ಬಳಸಲಾಗುತ್ತಿದೆ
5.	ಮಾದರಿ ಚಾಕಿ ಸಾಕಾಣಿಕಾ ಕೇಂದ್ರ	1.20	ರೈತರಿಗೆ ಪ್ರಾಯೋಗಿಕ ಚಾಕಿ ಸಾಕಾಣಿಕಾ ತರಬೇತಿ ನೀಡಲಾಗುತ್ತಿದೆ
6.	ರೇಷ್ಮೆ ಉತ್ಪಾದನಾ ಹಾಗೂ ನೂಲು ಬಿಚ್ಚಾಣಿಕಾ ತರಬೇತಿ ಕೇಂದ್ರ	2.89	ಸಣ್ಣ ಪ್ರಮಾಣದಲ್ಲಿ ರೇಷ್ಮೆ ಉದ್ದಿಮೆ ಕೈಗೊಳ್ಳುವ ಉದ್ದಿಮೆದಾರರಿಗೆ ನೂಲು ಬಿಚ್ಚಾಣಿಕೆ ತರಬೇತಿ ನೀಡಲು ಬಳಸಲಾಗುತ್ತಿದೆ.
7.	ಕಿರುನೂಲು ಬಿಚ್ಚುವ ಘಟಕ	12.53	ರೈತರಿಂದ ಪಡೆದ ರೇಷ್ಮೆ ಗೊಡುಗಳನ್ನು ಈ ಕೇಂದ್ರದಲ್ಲಿ ಉನ್ನತಮಟ್ಟದಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಕೈಗೊಳ್ಳಲಾಗುತ್ತಿದೆ.
8.	ವ್ಯವಸ್ಥಾಪಕರು ಮತ್ತು ಸಿಬ್ಬಂದಿಯವರ ವಸತಿ ಗೃಹಗಳು	2.39	ಅಧಿಕಾರಿಗಳ ಸಿಬ್ಬಂದಿಗಳ ವಸತಿಗಾಗಿ ಉಪಯೋಗಿಸಲಾಗುತ್ತಿದೆ.

1	2	3	4
II.	**ಎರಡನೇಯ ಹಂತದಲ್ಲಿ ನಿರ್ಮಿಸಲಾದ ಕಟ್ಟಡಗಳು 1985-1992**		
1.	ರೇಷ್ಮೆ ಸಹಾಯಕ ನಿರ್ದೇಶಕರ ವಸತಿ ಗೃಹಗಳು-(3)	5.40	ಅಧಿಕಾರಿಗಳ ವಸತಿಗಾಗಿ ಬಳಸಲಾಗುತ್ತಿದೆ.
2.	ಸಿಬ್ಬಂದಿಗಳ ವಸತಿ ಗೃಹಗಳು (17)	18.20	ಸಿ ಮತ್ತು ಡಿ ವರ್ಗದ ಸಿಬ್ಬಂದಿಗಳ ವಸತಿಗಾಗಿ ಬಳಸುತ್ತಿದೆ.
3.	ಮಹಿಳಾ ತರಬೇತಿದಾರರ ವಸತಿ ಗೃಹ	10.80	ಸದರಿ ವಸತಿ ಗೃಹವನ್ನು ತರಬೇತಿದಾರರ ಉಪಯೋಗಕ್ಕಾಗಿ ಬಳಸಲಾಗುತ್ತಿದೆ.
4.	ಮೌಂಟಿಂಗ್ ಹಾಲ್	2.16	ಹಣ್ಣಾದ ರೇಷ್ಮೆ ಹುಳುಗಳನ್ನು ಗೂಡು ಕಟ್ಟಲು ಬಿಡುವುದಕ್ಕಾಗಿ ಬಸಳಲಾಗುತ್ತಿದೆ.
5.	ಚಾಕಿ ಸಾಕಾಣಿಕಾ ಕೇಂದ್ರ	1.43	ನೂತನ ತಳಿಗಳ ಚಾಕಿ ಹುಳುಗಳನ್ನು 2ನೇ ಹಂತದವರೆಗೆ ವೈಜ್ಞಾನಿಕವಾಗಿ ಸಾಕಾಣಿಕೆ ಮಾಡಲು ಬಳಸಲಾಗುತ್ತಿದೆ
6.	ಬಲಿತ ಹುಳುಗಳ ಸಾಕಾಣಿಕೆ ಕಟ್ಟಡ	12.50	ಬಲಿತ ಹುಳುಗಳನ್ನು ಹಣ್ಣಾಗುವವರೆಗೆ ವೈಜ್ಞಾನಿಕವಾಗಿ ಸಾಕಾಣಿಕೆ ಮಾಡಲು ಬಳಸಲಾಗುತ್ತಿದೆ.

ರೇಷ್ಮೆ ಮಾರುಕಟ್ಟೆ ನಿಗಮದಲ್ಲಿ 5 ಕೋಟಿ ರೂ. ಅವ್ಯವಹಾರದ ಬಗ್ಗೆ

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಮಾರುಕಟ್ಟೆ ಹಾಗೂ ರೇಷ್ಮೆ ಕೈಗಾರಿಕಾ ನಿಗಮದಲ್ಲಿ ಅವ್ಯವಹಾರ ಪ್ರಕರಣ ನಡೆದಿದೆ;

ಆ) ನಡೆದಿದಲ್ಲಿ, ಹಗರಣದ ಸ್ವರೂಪ ಎಂತಹದ್ದು, ಹಗರಣದ ಮೊತ್ತವೆಷ್ಟು?

ಇ) ತಪ್ಪಿತಸ್ಥರು ಯಾರೆಂದು ಗುರುತಿಸಲಾಗಿದೆ; ಇಂತಹವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಈ ಅವ್ಯವಹಾರವನ್ನು ಸಿ.ಓ ಡಿ. ತನಿಖೆಗೆ ಒಪ್ಪಿಸಲಾಗಿದೆಯೇ; ತನಿಖೆ ಯಾವ ಹಂತದಲ್ಲಿದೆ?